ಚುನಾವಣೆಯನ್ನು ಮುಂದೂಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಪುನರ್ ರಚನೆ ಪ್ರಕ್ರಿಯೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು ಯಾವುವು ?

ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಗ್ರಾಮ ಪಂಚಾಯತಿಗಳನ್ನು ಪುನರ್ ರಚನೆ ಮಾಡಲಾಗುತ್ತಿದೆ.

ಆ) ಇಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 4 ಮತ್ತು 5 ಕ್ಕೆ ರಾಜ್ಯ ಸರ್ಕಾರವು ತಿದ್ದುಪಡಿ ಮಾಡಿ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ 1999ನ್ನು ಜಾರಿಗೆ ತಂದಿದ್ದು ಅದರಂತೆ ಗ್ರಾಮ ಪಂಚಾಯತಿ ಪ್ರದೇಶಗಳ ಪುನರ್ ವಿಂಗಡಣೆ ಕಾರ್ಯವು ಪ್ರಗತಿಯಲ್ಲಿದೆ.

ಪಂಚಾಯತಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರುಗಳ ವೇತನ ಪರಿಷ್ಕರಣ

1077 (1574)

ಶ್ರೀ ಜಿ.ವಿ.ಶ್ರೀ ರಾಮರೆಡ್ಡಿ (ಬಾಗೇನಲ್ಲಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದ ಪಂಚಾಯತ್‌ಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರುಗಳಿಗೆ ವೇತನ ಹೆಚ್ಚಿಸುವ ಬಗ್ಗೆ ಸರ್ಕಾರವು ಭರವಸೆಗಳನ್ನು ನೀಡಿದ್ದು ನಿಜವೇ ?

ಆ) ಹಾಗಿದ್ದಲ್ಲಿ ಈ ಭರವಸೆಗಳನ್ನು ಈಡೇರಿಸಲು ಸರ್ಕಾರಕ್ಕಿರುವ ಅಡ್ಡಿ ಆತಂಕಗಳೇನು ?

ಇ) ಈ ಭರವಸೆಗಳನ್ನು ಇನ್ನೂ ಎಷ್ಟು ಅವಧಿಯಲ್ಲಿ ಈಡೇರಿಸಲು ಸರ್ಕಾರ ಉದ್ದೇಶಿಸಲಾಗಿದೆ ?

ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ) ಪರಿಶೀಲನೆಯಲ್ಲಿದೆ

ಆ) ಗ್ರಾಮಪಂಚಾಯತ್ ನೌಕರರ ವೇತನವನ್ನು ಗ್ರಾಮ ಪಂಚಾಯತಿಗಳ ಉತ್ಪನ್ನದಿಂದ ಭರಿಸಬೇಕಾಗಿದ್ದು ಹಾಗೂ ಸಿಬ್ಬಂದಿ ವೆಚ್ಚವು ಆದಾಯದ ಶೇ 40ಕ್ಕಿಂತ ಮೀರಬಾರದೆಂದು ನಿಯಮದಲ್ಲಿ ತಿಳಿಸಿರುವುದರಿಂದ ಈ ಬಗ್ಗೆ ವಿವರವಾಗಿ ಪರಿಶೀಲಿಸಬೇಕಾಗಿರುತ್ತದೆ.

ಇ) ಶೀಘ್ರದಲ್ಲೇ ಈಡೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳಿಗೆ ವೈದ್ಯರು , ನರ್ಸ್‌ಗಳ ನೇಮಕಾತಿ

1078 (1575)

ಶ್ರೀ ಜಿ.ವಿ.ಶ್ರೀ ರಾಮರೆಡ್ಡಿ (ಬಾಗೇಪಲ್ಲಿ)

ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಆರೋಗ್ಯ ಘಟಕಗಳ ಸಂಖ್ಯೆ ಎಷ್ಟು ? ಜಿಲ್ಲಾವಾರು)

ಆ) ಈ ಆರೋಗ್ಯ ಕೇಂದ್ರಃ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರು ನರ್ಸ್‌ಗಳು ಫಾರ್ಮಾಸಿಸ್ಟ್‌ಗಳ ಸಂಖ್ಯೆ ಎಷ್ಟು ?

ಇ) ವೈದ್ಯರು ನರ್ಸ್‌ಗಳು , ಫಾರ್ಮಸಿಸ್ಟ್‌ಗಳನ್ನು ಆರೋಗ್ಯ ಘಟಕಗಳಿಗೆ ನೇಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಡಾ II ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 583 ಪ್ರಾಥಮಿಕ ಆರೋಗ್ಯ ಘಟಕಗಳು ಮಂಜೂರು ಮಾಡಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) 2108 ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ.

1639 ನರ್ಸ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ.

1275 ಫಾರ್ಮಾಸಿಸ್ಟ್ಸ್ ಕಾರ್ಯನಿರ್ವಹಿಸುತ್ತಿದ್ದಾರೆ.

ಇ) 573 ವೈದ್ಯರುಗಳನ್ನು 799 ಫಾರ್ಮಾಸಿಸ್ಟ್ಸ್ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆಯಲ್ಲಿರುತ್ತದೆ.

ನೇಮಕಾತಿ ಮಾಡಿದ ನಂತರ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. 1682 ಶುಶ್ರೂಷಕರನ್ನು ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾಥಮಿಕ ಆರೋಗ್ಯ ಘಟಕಗಳು ಹಾಗೂ ಆಸ್ಪತ್ರೆಗಳಲ್ಲಿ ನೇಮಕಾತಿ ಮಾಡಲಾಗಿದೆ.

ANNEXURE

STATEMENT SHOWING THE PRIMARY HEALTH CENTERE'S AND PRIMARY HEALTH UNIT'S IN THE STATE.

SL. No	District	PHC's	PHU's
1	Bangalore	31	42
2	Bangalore(Rural)	73	29
3	Chitradurga	57	32
4	Davanagere	67	33
5	Kolar	82	37
6	Shimoga	57	38
7	Tumkur	97	39
8	Bagalkota	46	02
9	Belgaum	135	13
10	Bijapur	65	02
11	Dharwad	28	03
12	Gadag	29	06
13	Haveri	50	23
14	U.Kannada	61	19
15	Bellary	54	17
16	Bidar	41	13
17	Gulbarga	105	24
18	Koppal	52	04
19	Raichur	38	04
20	Chamaraj anagara	43	07
21	Chickmagalur	51	40
22	D Kannada	64	05
23	Hassan	81	52
24	Kodagu	29	04
25	Mandya	71	37
26	Mysore	106	47
27	Udupi	63	11
Total		1676	583